**ಓ.ಎಸ್.ನಂ. 252/2022**

**- ಪಿ.ಡಬ್ಲ್ಯೂ:1**

ದಿನಾಂಕಃ 31-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎನ್ ಎಸ್ ಪ್ರತಿವಾದಿ ಪರ ವಕೀಲರಿಂದಃ-**

ಪ್ರತಿವಾದಿಗಳು ನನಗೆ ಮೊದಲಿನಿಂದಲೂ ಪರಿಚಯ. 1 ನೇ ಪ್ರತಿವಾದಿ ಗುಡುದಪ್ಪ ರವರ ಮಗ. ಗುಡುದಪ್ಪ ರವರಿಗೆ 5 ರಿಂದ 6 ಎಕರೆ ಜಮೀನು ಇತ್ತು. ಅವು ಗುಡುದಪ್ಪ ರವರ ಪಿತ್ರಾರ್ಜಿತ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತು ಗುಡುದಪ್ಪ ರವರ ಪಿತ್ರಾರ್ಜಿತ ಸ್ವತ್ತು ಎಂಬ ಬಗ್ಗೆ ನನಗೆ ತಿಳಿದಿರುವುದಿಲ್ಲ. ದಾವಾ ಸ್ವತ್ತು ಗುಡುದಪ್ಪ ರವರ ಹೆಸರಿನಲ್ಲಿ ಇತ್ತು. ಗುಡುದಪ್ಪ ರವರು ದಿಃ 25-11-1993 ರಲ್ಲಿ ಮರಣ ಹೊಂದಿದರು ಎಂದರೆ ಸರಿ. ದಾವಾ ಸ್ವತ್ತು ಗುಡುದಪ್ಪ ರವರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಗುಡುದಪ್ಪ ರವರೇ ದಾವೆ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತಿನ ಪಹಣಿ ಮತ್ತು ಎಂ. ಆರ್. ನೋಡಿರುವುದಿಲ್ಲ. ನಾನು ಪಹಣಿ ಮತ್ತು ಎಂ. ಆರ್ ಅನ್ನು ಗುಡುದಪ್ಪ ರವರಿಂದ ಪಡೆದುಕೊಂಡಿರುತೇನೆ, ಅದರೆ ಅದನ್ನು ಹಾಜರುಪಡಿಸಿರುವುದಿಲ್ಲ. ಗುಡುದಪ್ಪ ರವರಿಗೆ ದಾವಾ ಸ್ವತ್ತು ಹೇಗೆ ಬಂತು ಎಂಬ ಪ್ರಶ್ನೆಗೆ ಅದು ಅವರ ಪಿತ್ರಾರ್ಜಿತ ಸ್ವತ್ತು ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಗೆ 66 ವರ್ಷ ಎಂದರೆ ಸರಿ. 2 ನೇ ಪ್ರತಿವಾದಿಗೆ 46 ವರ್ಷ ಎಂದರೆ ಸರಿ. ನಾನು ಹೇಳುವ ಕರಾರು ಆಗಿದೆ ಎಂಬ ದಿನದಂದು 1 ನೇ ಪ್ರತಿವಾದಿಯು ವಯಸ್ಕರಾಗಿದ್ದರು ಎಂದರೆ ಸರಿ. ಆ ಸಮಯದಲ್ಲಿ 2 ಮತ್ತು 3 ನೇ ಪ್ರತಿವಾದಿಗಳು ಮೈನರ್ ಮಕ್ಕಳು ಎಂದರೆ ಸರಿ. ನನಗೆ ಸ್ವತ್ತುಗಳನ್ನು ಖರೀದಿಸುವ ಮುನ್ನ ಏನು ಮಾಡಬೇಕು ಮತ್ತು ಹೇಗೆ ಮಾರಾಟ ಮಾಡಬೇಕು ಎಂದು ತಿಳುವಳಿಕೆ ಇದೆ. ಸ್ವತ್ತು ಖರೀದಿಸಬೇಕಾದರೆ ಅದು ನೊಂದಣಿಯಾಗಬೇಕು ಎಂದರೆ ಸರಿ. ನಾನು ಹೇಳುವ ಕರಾರಿನ ದಿನ ಕ್ರಯಪತ್ರ ನೊಂದಾಯಿಸಲು ನನಗೆ ತೊಂದರೆ ಇರಲಿಲ್ಲ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ನೊಂದಣಿ ಮಾಡುವ ಅವಶ್ಯಕತೆ ಇರಲಿಲ್ಲ ಎಂದು ನುಡಿಯುತ್ತಾರೆ. ಗುಡುದಪ್ಪ ಮತ್ತು ಆತನ ಮಕ್ಕಳು ಮತ್ತು ಮೊಮ್ಮಕ್ಕಳು ಒಟ್ಟಿಗೆ ವಾಸ ಇದ್ದರು.

ನನಗೆ ಕ್ರಯದ ಕರಾರು ಬರೆದುಕೊಟ್ಟ 34 ವರ್ಷಗಳ ನಂತರ ಗುಡುದಪ್ಪ ತೀರಿಕೊಂಡಿರುತ್ತಾರೆ. ಗುಡುದಪ್ಪ ರವರು ಬದುಕಿದ್ದಾಗ ಕ್ರಯಪತ್ರ ನೊಂದಾಯಿಸಿಕೊಳ್ಳಲು ಪ್ರಯತ್ನಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಗುಡುದಪ್ಪ ಬರಲು ಆಗುತಿರಲಿಲ್ಲ ಮತ್ತು ಅವರ ಮಗ ಕ್ರಯಪತ್ರ ಬರೆದುಕೊಡುತ್ತೇವೆ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಕ್ರಯದ ಕರಾರು ಆದ ಸಮಯದಲ್ಲಿ ಕ್ರಯದ ನೊಂದಣಿಗೆ ಬೇಕಾದ ಎಲ್ಲಾ ದಾಖಲೆಗಳು ಇದ್ದವು. ಗುಡುದಪ್ಪ ರವರ ಜೀವಿತಾವಧಿಯಲ್ಲಿ ನಾನು 3-4 ಬಾರಿ ಕ್ರಯಪತ್ರ ಬರೆದುಕೊಂಡುವಂತೆ ಕೇಳಿಕೊಂಡಿರುತ್ತೇನೆ. ಕ್ರಯಪತ್ರ ಬರೆಸಿಕೊಳ್ಳಲು ನಾನು ಗುಡುದಪ್ಪ ರವರ ಜೀವಿತ ಕಾಲದಲ್ಲಿ ಯಾವುದೇ ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ಗುಡುದಪ್ಪ ರವರ ಮರಣಾನಂತರ ಆತನ ವಾರಸುಧಾರರಿಗೆ ನೋಟೀಸು ನೀಡಿ ಅಥವಾ ಇತರೇ ಕಾನೂನು ಕ್ರಮ ಕೈಗೊಂಡು ಕ್ರಯಪತ್ರ ಬರೆಸಿಕೊಳ್ಳಲು ನಾನು ಪ್ರಯತ್ನಿಸಿರುವುದಿಲ್ಲ.

ಸಾಮಾನ್ಯವಾಗಿ ಕ್ರಯಪತ್ರ ನೊಂದಣಿಯಾಗದೆ ಖಾತೆ ಬದಲಾಗುವುದಿಲ್ಲ ಎಂದರೆ ಸರಿ. ನಿಪಿ-8 ರ ಪ್ರಕಾರ ದಾವಾ ಸ್ವತಿನ ಸ.ನಂ. 24/1 ಪಿ 1 ರ 1 ಎಕರೆ 21 ½ ಗುಂಟೆ ಯಲ್ಲಿ 1 ನೇ ಪ್ರತಿವಾದಿ ಖಾತೆದಾರರು ಮತ್ತು ಸ್ವಾಧೀನ ದಾರರು ಎಂದು ನಮೂದು ಇದೆ ಎಂದರೆ ಸರಿ. ಗುಡುದಪ್ಪ ರವರಿಗೆ ವಿದ್ಯಾಭ್ಯಾಸ ಇರುವುದಿಲ್ಲ. ನಾನು ಸ್ವಲ್ಪ ವಿದ್ಯಾಭ್ಯಾಸ ಮಾಡಿರುತ್ತೇನೆ. ಕರಾರಿನ ಪ್ರಕಾರ ಕ್ರಯಪತ್ರ ಬರೆದುಕೊಡದಿದ್ದರೆ ನಂತರ ಏನು ಮಾಡಬೇಕು ಎಂದು ನಮ್ಮ ನಡುವೆ ಮಾತುಕತೆಯಾಗಿರುವುದಿಲ್ಲ. ನಿಪಿ-1 ರ ಪ್ರಕಾರ 11-03-1993 ರಂದು ಕರಾರು ಆಗಿದೆ ಎಂದು ನಮೂದು ಮಾಡಿಸಿರುತ್ತೇನೆ. 1 ನೇ ಪ್ರತಿವಾದಿ ವಿದ್ಯಾಭ್ಯಾಸ ಮಾಡಿರುವುದಿಲ್ಲ. 1 ನೇ ಪ್ರತಿವಾದಿ ಸಹಿ ಮಾಡುತ್ತಾರೆ. ಗುಡುದಪ್ಪ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಾರೆ.

ಗುಡುದಪ್ಪ ಸ್ವತ್ತನ್ನು ಮಾರಾಟಮಾಡುತ್ತೇನೆ ಎಂದು ತಿಳಿಸಿದ್ದರಾ ಅಥವಾ ನನಗೆ ಸ್ವತ್ತು ಬೇಕು ಎಂದು ನೀವು ಗುಡುದಪ್ಪ ರವರನ್ನು ಕೇಳಿದ್ದೀರಾ ಎಂಬ ಪ್ರಶ್ನೆಗೆ 1 ನೇ ಪ್ರತಿವಾದಿ ಮಹೇಶ್ವರಪ್ಪ ಸ್ವತ್ತು ಮಾರಾಟ ಮಾಡುತ್ತೇನೆ ಎಂದು ಬಂದಿದ್ದರು ಎಂದು ನುಡಿಯುತ್ತಾರೆ. ನಿಪಿ-1 ರ ಒಕ್ಕಣೆಯಲ್ಲಿ ಮಹೇಶ್ವರಪ್ಪರವರು ಕರಾರು ಬರೆದುಕೊಟ್ಟ ಬಗ್ಗೆ ಇರುವುದಿಲ್ಲ. 10 ಸಾವಿರ ಹಣ ಪಾವತಿ ಮಾಡಿದ್ದೇನೆ ಎಂದು ತೋರಿಸಲು ನಾನು ರಶೀದಿ ಪಡೆದಿರುವುದಿಲ್ಲ. ಕರಾರು ಪತ್ರಕ್ಕೆ ನಾನು ಸಹಿ ಮಾಡಿರುವುದಿಲ್ಲ. ಮಹೇಶ್ವರಪ್ಪ ಮತ್ತು ನಂಜುಂಡಪ್ಪ ಮಾತ್ರ ಸದರಿ ಕರಾರಿಗೆ ಸಹಿ ಮಾಡಿರುತ್ತಾರೆ. ಜಮೀನಿನ ಮಾತುಕತೆ ನನ್ನ ಮನೆಯಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ನಾನು, ನಂಜುಂಡಪ್ಪ ಮತ್ತು ಮಹೇಶ್ವರಪ್ಪ ಮಾತ್ರ ಇದ್ದೆವು. ಅದೇ ದಿನ ನಾನು ಕ್ರಯದ ಮೊತ್ತವನ್ನು ನೀಡಿರುತೇನೆ. ಕ್ರಯದ ಹಣ ನೀಡುವಾಗ ನಂಜುಂಡಪ್ಪ ಇರಲಿಲ್ಲ. ನಾನು ಹಣವನ್ನು ಮದ್ಯಾಹ್ನ ನೀಡಿರುತ್ತೇನೆ. ನಾನು ಹಣ ಪಾವತಿ ಮಾಡಿದ ದಿನ ನಾನಾಗಲೀ ಅಥವಾ ಮಹೇಶ್ವರಪ್ಪ ಕಡೂರಿಗೆ ಬಂದಿರುವುದಿಲ್ಲ. ಹಣ ಪಾವತಿ ಮಾಡಿದ ನಂತರ ನಾನು ಕರಾರಿನ ಸಂಬಂಧವಾಗಿ ಮತ್ತೆ ಯಾರನ್ನು ಭೇಟಿಯಾಗಿರುವುದಿಲ್ಲ.

ಹಣ ಕೊಡುವ ಮುನ್ನ ಅಂದರೆ 15 ದಿನದ ಮುನ್ನ ನಾನು ಕ್ರಯದ ಕರಾರನ್ನು ಕಡೂರಿನಲ್ಲಿ ಬೆರಳಚ್ಚು ಮಾಡಿಸಿರುತ್ತೇನೆ. ಕರಾರು ಆಗುವ ದಿನ ನಾನು, ಮಹೇಶ್ವರಪ್ಪ ಮತ್ತು ಬಿಕ್ಲಂರಾದ ಲಿಂಗಪ್ಪ ಮಾತ್ರ ಇದ್ದೆವು. ಬಿಕ್ಲಂ ದಾರರಿಗೆ ನಾನು ಮತ್ತು ಮಹೇಶ್ವರಪ್ಪ ಮಾಹಿತಿ ನೀಡಿರುತ್ತೇವೆ. ಕ್ರಯದ ಕರಾರು ಬರೆದ ದಿನ ನಾನು 10 ಸಾವಿರ ನೀಡಿರುವುದಿಲ್ಲ, ಆದರೆ 15 ದಿನದ ನಂತರ ನೀಡಿರುತ್ತೇನೆ. ಕ್ರಯದ ಕರಾರಿನಲ್ಲಿ ಆ ದಿನವೇ ಹಣ ಪಾವತಿ ಮಾಡಲಾಗಿದೆ ಎಂದು ನಮೂದು ಮಾಡಿಸಿರುತ್ತೇನೆ.ಕ್ರಯದ ಕರಾರು ಬೆರಳಚ್ಚು ಮಾಡಿಸಿದ ದಿನವೇ ಕ್ರಯಪತ್ರ ನೊಂದಣಿ ಮಾಡಬಹುದಾಗಿತ್ತುಎಂಬ ಪ್ರಶೆನಗೆ ಸಾಕ್ಷಿಯು ಆ ದಿನ ನನ್ನ ಬಳಿ ಅಷ್ಟು ದುಡ್ಡು ಇರಲಿಲ್ಲ ಮತ್ತು ಮುಂದುವರೆದು ನೊಂದಣಿಗೂ ಸಹ ದುಡ್ಡು ಇರಲಿಲ್ಲ ಎಂದು ನುಡಿಯುತ್ತಾರೆ.

ಕ್ರಯದ ಕರಾರು ಬೆರಳಚ್ಚು ಮಾಡಿಸಿಕೊಂಡು ಬಂದ ಮರುದಿನ ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ಕರಾರಿಗೆ ಪಡೆದುಕೊಂಡಿರುತ್ತೇನೆ. ಆಗ ದುಡ್ಡು ಎಷ್ಟು ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಆಗ ನನ್ನ ಬಳಿ ದುಡ್ಡು ಇರಲಿಲ್ಲ ಮತ್ತು ನೊಂದಣಿಗೆ ಎಷ್ಟು ಎಂದು ನನಗೆ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಕ್ರಯದ ಕರಾರು ಆಗುವ ಸಮಯದಲ್ಲಿ ಅಂದಾಜು 3 ಎಕರೆ ಇತ್ತು. ಅಂದಾಜು ಆದಾಯ ಎಷ್ಟು ಬರುತಿತ್ತು ಎಂದು ನನಗೆ ತಿಳಿದಿರುವುದಿಲ್ಲ.

10 ಸಾವಿರವನ್ನು ನನ್ನ ಅಣ್ಣ ನಮಗೆ ನೀಡಿರುತ್ತಾರೆ. ನಾನು ನನ್ನ ಅಣ್ಣನೊಂದಿಗೆ ಒಟ್ಟಿಗೆ ಇದ್ದೆವು. ಕ್ರಯದ ಕರಾರಿಗೆ ಪತ್ರವನ್ನು ಬಿಕ್ಲಂರಾದ ಲಿಂಗಪ್ಪ ರವರ ಮಗ ತಮ್ಮಯ್ಯರವರಿಂದ ಖರೀದಿಸಿದ ದಿನವೇ ಬೆರಳಚ್ಚು ಮಾಡಿಸಿರುತ್ತೇನೆ. ಗುಡುದಪ್ಪ ರವರ ಹೆಸರಿನಲ್ಲಿ ಕರಾರು ಪತ್ರವನ್ನು ಖರೀದಿಸಿರುತ್ತೇನೆ.

10 ಸಾವಿರ ಹಣವನ್ನು ಒಂದು ತಿಂಗಳ ನಂತರ ಹೊಂದಿಸಿಕೊಂಡಿರುತ್ತೇನೆ. ಹಣ ಹೊಂದಿಸಿಕೊಂಡ ನಂತರ ನಾನು ನೊಂದಣಿ ಮಾಡಲು ಗುಡುದಪ್ಪ ರವರನ್ನು ಕರೆದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಅವರ ಮಗ ಮಹೇಶ್ವರಪ್ಪ ರವರನ್ನು ಕರೆದಿದ್ದೆ, ಆದರೆ ಅವರು ಹೋಗೋಣ ಎಂದು ತಿಳಿಸಿದ್ದರು ಎಂದು ನುಡಿಯುತ್ತಾರೆ. ಯಾವ ಉದ್ದೇಶಕ್ಕಾಗಿ ಮಾರಾಟ ಮಾಡಲಾಗಿದೆ ಎಂದು ಕರಾರು ಪತ್ರದಲ್ಲಿ ನಮೂದು ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಅದರ ಬಗ್ಗೆ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಕರಾರಿಗೆ ಸಹಿ ಮತ್ತು ಹೆಬ್ಬೆಟಿನ ಗುರುತು ಪಡೆದುಕೊಳ್ಳುವಾಗ ಗುಡುದಪ್ಪ ಮತ್ತು ಆತನ ಹೆಂಡತಿ ಮಾತ್ರ ಇದ್ದರು. ಸಾಕ್ಷಿ ಮುಂದುವರೆದು ಮಹೇಶ್ವರಪ್ಪ ಸಹ ಇದ್ದರು ಎಂದು ನುಡಿಯುತ್ತಾರೆ. ಆದಿನ ನಂಜುಂಡಪ್ಪ ಮತ್ತು ಕ್ಯಾತೇಗೌಡ ಇರಲಿಲ್ಲ.

ನಿಪಿ-1 ಕರಾರಿನಲ್ಲಿ 3 ಜನರ ಸಾಕ್ಷಿಗಳ ಸಹಿ ಇದೆ ಎಂದರೆ ಸರಿ. ಸಾಕ್ಷಿಗಳ ತಂದೆ ಹೆಸರು ಮತ್ತು ವಿಳಾಸ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಅದನ್ನು ಬಿಕ್ಲಂದಾರರು ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಾನು ಈ ದಾವೆಯನ್ನು ಹೂಡಿರುವುದಿಲ್ಲ ಮತ್ತು ಪ್ರತಿವಾದಿಗಳು ನೋಟೀಸು ನೀಡಿದ ನಂತರ ನಾನು ಬಂದಿರುತೇನೆ. ನಾನು ನ್ಯಾಯಾಲಯದಲ್ಲಿ ಯಾವುದೇ ಪರಿಹಾರ ಕೇಳಿರುವುದಿಲ್ಲ. ದಾವೆಯನ್ನು ದಾಖಲಿಸುವ ಮುನ್ನ ನಾನು ಪ್ರತಿವಾದಿಗಳಿಗೆ ಯಾವುದೇ ನೊಟೀಸು ನೀಡಿರುವುದಿಲ್ಲ. ಕ್ರಯಪತ್ರವನ್ನು ನೊಂದಾಯಿಸಿಕೊಡಿ ಎಂದು ನಾನು ಯಾವುದೇ ಕಾನೂನು ಕ್ರಮ ಮತ್ತು ಲೀಗಲ್ ನೋಟೀಸು ನೀಡಿರುವುದಿಲ್ಲ.

ಒ ಎಸ್ 385/2015 ರಲ್ಲಿ ನಾನು ವಕೀಲರನ್ನು ನೇಮಿಸಿಕೊಂಡಿದ್ದೆ ಆದರೆ ತಕರಾರು ಹಾಕಿರುವುದಿಲ್ಲ. ಸದರಿ ದಾವೆಯಲ್ಲಿ ಗುಡುದಪ್ಪ ರವರು ನನಗೆ ಕ್ರಯದ ಕರಾರು ಬರೆದುಕೊಟ್ಟಿದ್ದಾರೆ ಮತ್ತು ನಾನು ಸ್ವಾಧೀನದಲ್ಲಿ ಇದ್ದೇನೆ ಎಂದು ತಿಳಿಸಿರುವುದಿಲ್ಲ. ನನಗೆ RA 35/2020 ರಲ್ಲಿ ನೋಟೀಸು ಬಂದಿರುವುದಿಲ್ಲ ಮತ್ತು ಆ ಮೇಲ್ಮನವಿಯಲ್ಲಿ ಹಾಜರಾಗಿರುವುದಿಲ್ಲ. ನಾನು ವಕೀಲರಿಗೆ ಯಾವುದೇ ಮಾಹಿತಿ ನೀಡಿರುವುಲ್ಲ. ನನಗೆ ಕ್ರಯದ ಕರಾರು ಆಗಿದೆ ಮತ್ತು ಸ್ವಾಧೀನದಲ್ಲಿ ಇದ್ದೇನೆ ಎಂದು ಮೇಲ್ಮನವಿಯಲ್ಲಿ ತಿಳಿಸಿರುವುದಿಲ್ಲ. ನಾನು ದಾವಾ ಸ್ವತ್ತಿನಲ್ಲಿ ಸ್ವಾಧೀನ ಇದ್ದೇನೆ ಮತ್ತು ಕ್ರಯಪತ್ರ ಬರೆದುಕೊಡಿ ಹಾಗೂ ಸದಾ ಸಿದ್ದ ಇದ್ದೇನೆ ಎಂದು ಪ್ರತಿವಾದಿಗೆ ಕಾನೂನಿನ ನೋಟೀಸು ನೀಡಿರುವುದಿಲ್ಲ. ಕ್ರಯದ ಕರಾರು ಆದ 34 ವರ್ಷ ಗುಡುದಪ್ಪ ಬದುಕಿದ್ದರು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ಗುಡುದಪ್ಪ ಹೆಬ್ಬೆಟ್ಟಿನ ಗುರುತು ಹಾಕಿಕೊಟ್ಟಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಮನೆಗೆ ಹೋಗಿ ಹಾಕಿಸಿಕೊಂಡಿದ್ದೇನೆ ಎಂದು ನುಡಿಯುತ್ತಾರೆ. ನನಗೆ ಗುಡುದಪ್ಪ 1 ಎಕರೆ 10 ಗುಂಟೆಗೆ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಾನು ದಾವಾ ಸ್ವತಿನಲ್ಲಿ ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ಅನ್ನು ಸೃಷ್ಟಿಸಿದ್ದೇನೆ ಆದರಿಂದ ಗುಡುದಪ್ಪ ರವರು ಬದುಕಿದ್ದಾಗ ಮತ್ತು ಅವರ ಮಕ್ಕಳಿಗೆ ಈವರಗೂ ನೋಟೀಸು ನೀಡಿಲ್ಲ ಎಂದರೆ ಸರಿಯಲ್ಲ. ನಾನು ಕ್ರಯಪತ್ರ ಬರೆಸಿಕೊಳ್ಳಲು  ಸಿದ್ದ ಇದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-8 ರಿಂದ 10 ದಾಖಲೆಗಳ ಪ್ರಕಾರ 1 ನೇ ಪ್ರತಿವಾದಿಯೇ ಸ್ವಾಧೀನ ದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಾನು ಕಟ್ಟಿರುವ ಮನೆಯ ಜಾಗಕ್ಕೆ ಅನ್ಯಕ್ರಾಂತ ( Alienation) ಮಾಡಿಸಿರುವುದಿಲ್ಲ.  ಆಶ್ರಯ ಮನೆ ಕಟ್ಟಬೇಕಾದರೆ ಖಾತೆ ನಕಲು ಬೇಕು ಎಂದರೆ ಸರಿ.  ಖಾತಾ ನಕಲನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತೇನೆ. ನನ್ನ ಹೆಸರಿನಲ್ಲಿರುವ ಖಾತೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ಮನೆಯ 21 x 33 ಕ್ಕೆ  ನಿರ್ಮಿಸಿದ್ದು ಅದಕ್ಕೆ ಖಾತೆ ಪಡೆದುಕೊಂಡಿರುತ್ತೇನೆ. 21x 33 ಕ್ಕೆ ನಾನು ಸ್ವತ್ತನ್ನು ಬೇರ್ಪಡಿಸಿ ಖಾತೆ ಮಾಡಿಸಿರುತ್ತೇನೆ.  ಖಾತೆ ಬೇರ್ಪಡಿಸಿರುವುದಕ್ಕೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಬೇರೆಯವರ ಹೆಸರಿನಲ್ಲಿ ಖಾತೆ ಇದ್ದಾಗ ನನಗೆ ಖಾತೆ ಮಾಡಲು ಬರುವದಿಲ್ಲ ಮತ್ತು ಆಶ್ರಯಯೋಜನೆಯಡಿ ಮನೆ ಕಟ್ಟಲು ಅವಾಕಾಶ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಏನೋ ಗೊತಿಲ್ಲ ಮನೆ ಕಟ್ಟಿದ್ದೇನೆ ಎಂದು ನುಡಿಯುತ್ತಾರೆ. ಅಕ್ರಮವಾಗಿ ಕ್ರಯದ ಕರಾರನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ  ತೊಂದಗೆ ಮಾಡಲು 1 ½ ಗುಂಟೆ ಅತಿಕ್ರಮಿಸಿ ಅಕ್ರಮ ಸ್ವಾಧೀನ ಇದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಮೋಸ ಮಾಡಲು ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸ.ಇ.ಎ.ಒ.
Sd/-

**2 ನೇ.ಹೆ.ಪ್ರಃದಃನ್ಯಾಃದಂ.,ರವರು,**
**ಕಡೂರು.**